**ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಸಂಬಂಧಿಸಿದಂತೆ ಭಾರತೀಯ ವೈದ್ಯಕೀಯ ಮಂಡಳಿ ತಂಡವು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭೇಟಿ ನೀಡುವ ಹಿನ್ನಲೆಯಲ್ಲಿ, ನಿರ್ದೇಶಕರು, ಮಿಮ್ಸ್ ಮಂಡ್ಯ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:11.02.2014ರಂದು ಕೌನ್ಸಿಲ್ ಸಭಾಂಗಣದಲ್ಲಿ ನಡೆದ ಸಭೆಯ ನಡವಳಿಗಳು.**

ಪ್ರಾರಂಭದಲ್ಲಿ, ನಿರ್ದೇಶಕರು ಉಪಸ್ಥಿತರಿದ್ದ ಸಂಸ್ಥೆಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳನ್ನು ಸಭೆಗೆ ಸ್ವಾಗತಿಸಿದರು.

1) ಭಾರತೀಯ ವೈದ್ಯಕೀಯ ಮಂಡಳಿ, ನವದೆಹಲಿ ಇವರು ಸಂಸ್ಥೆಯ ಪಿ.ಜಿ ಪ್ರವೇಶಾತಿಗಳಿಗೆ ಸಂಬಂಧಿಸಿದಂತೆ ತಪಾಸಣೆಗಾಗಿ ಸಧ್ಯದಲ್ಲಿಯೇ ಭೇಟಿ ನೀಡಬಹುದಾಗಿರುವುದರಿಂದ ತಮ್ಮ ತಮ್ಮ ವಿಭಾಗಕ್ಕೆ ಸಂಬಂಧಪಟ್ಟಂತೆ ತಪಾಸಣಾ ವೇಳೆಯಲ್ಲಿ ನಿರೀಕ್ಷಿಸಬಹುದಾದ ಪಿ.ಜಿ ಪ್ರವೇಶಾತಿ ಮಾಹಿತಿಗಳೆಲ್ಲವನ್ನು ಸಿದ್ಧಪಡಿಸಿಟ್ಟುಕೊಳ್ಳಲು ಪ್ರಾಧ್ಯಾಪಕರು/ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

2) ವಿಭಾಗಗಳ ಮುಖ್ಯಸ್ಥರು/ಪ್ರಾಧ್ಯಾಪಕರುಗಳು ತಾವು ಸೇರಿದಂತೆ ತಮ್ಮ ಅಧೀನದಲ್ಲಿನ ಯಾವುದೇ ಸಿಬ್ಬಂದಿಗಳಿಗೆ ರಜೆಯನ್ನು ಮಂಜೂರು ಮಾಡಬಾರದಾಗಿ ಹಾಗೂ ಉನ್ನತ ಶಿಕ್ಷಣಕ್ಕಾಗಿ ತೆರಳಿರುವ ವೈದ್ಯರುಗಳನ್ನು ತಪಾಸಣಾ ವೇಳೆ ಹಾಜರಿರುವಂತೆ ತಿಳಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ಪ್ರಾಧ್ಯಾಪಕರುಗಳಿಗೆ ನಿರ್ದೇಶಕರು ಸೂಚ್ಯವಾಗಿ ಸೂಚಿಸಿದರು.

3) ವಿಭಾಗಗಳ ಮುಖ್ಯಸ್ಥರು/ಪ್ರಾಧ್ಯಾಪಕರುಗಳು ತಾವೂ ಸೇರಿದಂತೆ ತಮ್ಮ ಅಧೀನದಲ್ಲಿ ಬರುವ ವೈದ್ಯರುಗಳ ಬಳಿ Declaration Form ಗಳನ್ನು ಭರ್ತಿಮಾಡಿ ಸಿದ್ಧಪಡಿಸಿಟ್ಟುಕೊಂಡು ತಪಾಸಣಾ ವೇಳೆ ಅಗತ್ಯವಿದ್ದಲ್ಲಿ ಸಲ್ಲಿಸಲು ಮುಖ್ಯಸ್ಥರು/ಪ್ರಾಧ್ಯಾಪಕರುಗಳಿಗೆ ನಿರ್ದೇಶಕರು ಸೂಚಿಸಿದರು.

4) ಪಿ.ಜಿ ಪ್ರವೇಶಾತಿಗೆ ಸಂಬಂಧಿಸಿದಂತೆ ತಮ್ಮ ತಮ್ಮ ವಿಭಾಗಗಳಿಗೆ ಅವಶ್ಯಕತೆ ಇರುವಂತಹ, ರಾಸಾಯನಿಕ ವಸ್ತು ಮತ್ತು ಇತರೆ ಸಾಮಗ್ರಿ (Equipment, Chemicals etc.) ಗಳನ್ನು ಸಂಸ್ಥೆಯ ಕಛೇರಿಗೆ ಕೋರಿಕೆಗಳನ್ನು ನೀಡಿ, ಅವುಗಳನ್ನು ಶೀಘ್ರ ಪಡೆದುಕೊಳ್ಳುವಂತೆ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ಪ್ರಾಧ್ಯಾಪಕರುಗಳಿಗೆ ನಿರ್ದೇಶಕರು ಸೂಚಿಸಿದರು.

5) ಇದೇ ಸಂಧರ್ಭದಲ್ಲಿ, ವಿವಿಧ ವಿಭಾಗದ ಪ್ರಾಧ್ಯಾಪಕರು/ಮುಖ್ಯಸ್ಥರುಗಳು ತಮ್ಮ ತಮ್ಮ ವಿಭಾಗಗಳಲ್ಲಿ ಪಿ.ಜಿ ಪ್ರವೇಶಾತಿಗೆ ಸಂಬಂಧಿಸಿದಂತೆ ತಂತ್ರಜ್ಞರ ಕೊರತೆಯಿರುವುದಾಗಿಯೂ ಕಛೇರಿ ಕೆಲಸ ಕಾರ್ಯಗಳಿಗೆ ಅಡಚಣೆಯಾಗುತ್ತಿರುವ ಅಂಶವನ್ನು ನಿರ್ದೇಶಕರವರ ಗಮನಕ್ಕೆ ತಂದರು. ಪ್ರಾಧ್ಯಾಪಕರು/ಮುಖ್ಯಸ್ಥರುಗಳಿಗೆ ಉಚಿತ ರೂಪದಲ್ಲಿ ತಮ್ಮ ತಮ್ಮ ವಿಭಾಗಕ್ಕೆ

ಅವಶ್ಯಕತೆಯಿರುವಂತಹ ತಂತ್ರಜ್ಞರುಗಳ ಪಟ್ಟಿಯನ್ನು ಸಿದ್ದಪಡಿಸಿ ಸಲ್ಲಿಸುವಂತೆ ಸೂಚಿಸಿದರಲ್ಲದೆ, ಈ ಪ್ರಸ್ತಾವನೆಯನ್ನು ಸರ್ಕಾರದ ಕಾರ್ಯದರ್ಶಿಗಳು/ ಮಾನ್ಯ ಸಚಿವರುಗಳ ಸಮ್ಮುಖದಲ್ಲಿ ಚರ್ಚಿಸುವುದಾಗಿಯೂ ತಿಳಿಸಿದರು.

6) ಸಂಸ್ಥೆಯ ಕ್ಲಿನಿಕಲ್ ವಿಭಾಗಗಳ ಒ.ಪಿ.ಡಿ ಕೊಠಡಿಗಳ ಮುಂದೆ ಆಯಾ ವಿಭಾಗದ ವೈದ್ಯರುಗಳ ಹೆಸರುಗಳುಳ್ಳ ಬೋರ್ಡ್‌ಗಳನ್ನು ಅಳವಡಿಸುವಂತೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ಪ್ರಾಧ್ಯಾಪಕರುಗಳಿಗೆ ನಿರ್ದೇಶಕರು ಸೂಚಿಸಿದರು.

7) ಸಂಸ್ಥೆಯ ವೈದ್ಯಶಾಸ್ತ್ರ ವಿಭಾಗ ಮತ್ತು ಶಸ್ತ್ರ ಚಿಕಿತ್ಸಾ ವಿಭಾಗಗಳನ್ನು (120 ಹಾಸಿಗೆ) 04 ಘಟಕಗಳನ್ನಾಗಿ ವಿಂಗಡಣೆ ಮಾಡಿಕೊಳ್ಳಲು ಹಾಗೂ ಆಯಾ ಘಟಕಕ್ಕೆ ಸಂಬಂಧಪಟ್ಟಂತೆ ತಪಾಸಣಾ ಸಮಯದಲ್ಲಿ ಎಲ್ಲಾ ವೈದ್ಯರುಗಳು ಕಡ್ಡಾಯವಾಗಿ ಹಾಜರಿರುವಂತೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ಪ್ರಾಧ್ಯಾಪಕರುಗಳಿಗೆ ನಿರ್ದೇಶಕರು ಸೂಚಿಸಿದರು.

8) ಕೆಲವು ವಿಭಾಗಗಳಲ್ಲಿನ ಪ್ರಾಧ್ಯಾಪಕರು/ಮುಖ್ಯಸ್ಥರುಗಳಿಗೆ ಪ್ರತ್ಯೇಕ ಕೊಠಡಿಗಳಿಲ್ಲದಿರುವುದು ತಮ್ಮ ಗಮನಕ್ಕೆ ಬಂದಿರುವುದಾಗಿಯೂ ತಮ್ಮ ತಮ್ಮ ವಿಭಾಗಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಕೊಠಡಿ ವ್ಯವಸ್ಥೆಯನ್ನು ಲಭ್ಯವಿರುವ ಸ್ಥಳವಕಾಶವನ್ನು ಬಳಸಿಕೊಳ್ಳುವುದರ ಮುಖೇನ ತಮ್ಮ ಹಂತದಲ್ಲಿಯೇ ಹೊಂದಾಣಿಕ ಮಾಡಿಕೊಳ್ಳುವಂತೆ ಸಂಬಂಧಪಟ್ಟ ಪ್ರಾಧ್ಯಾಪಕರು/ ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

ವಂದನೆಗಳೊಡನೆ ಸಭೆಯು ಮುಕ್ತಾಯಗೊಂಡಿತು.

ನಿರ್ದೇಶಕರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.

ಪ್ರತಿಯನ್ನು:

1. ವೈದ್ಯಕೀಯ ಅಧೀಕ್ಷಕರು, ಬೋಧಕ ಆಸ್ಪತ್ರೆ, ಮಿಮ್ಸ್ ಮಂಡ್ಯ ರವರ ಮಾಹಿತಿಗಾಗಿ.
2. ಎಲ್ಲಾ ವಿಭಾಗದ ಪ್ರಾಧ್ಯಾಪಕರು/ಮುಖ್ಯಸ್ಥರು, ಮಿಮ್ಸ್ ಮಂಡ್ಯ ಇವರ ಮಾಹಿತಿಗೆ
3. ಕಛೇರಿ ಪ್ರತಿ.